ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 2, May-June 2024, Pp. 162-168
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಹೊಸದುರ್ಗ ಮತ್ತು ಹೊಳಲ್ಕೆರೆಯ ಬೃಹತ್ ಗಣೇಶ ಶಿಲ್ಪಗಳು

**ವೆಂಕಟೇಶ ಹೆಚ್[1] ಮತ್ತು ಪ್ರೊ. ಸರ್ವಮಂಗಳ[2]**

[1]ಸಂಶೋಧನಾ ವಿದ್ಯಾರ್ಥಿ, [2]ಮುಖ್ಯಸ್ಥರು
ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ಶಿವಮೊಗ್ಗ.

***Abstract:***

*ಚಿತ್ರದುರ್ಗ ಜಿಲ್ಲೆಯ ಆರು ತಾಲೂಕುಗಳಲ್ಲಿ ಹೊಸದುರ್ಗ ಮತ್ತು ಹೊಳಲ್ಕೆರೆ ಪ್ರಮುಖ ತಾಲೂಕುಗಳಾಗಿವೆ. ಚಿತ್ರದುರ್ಗ ಜಿಲ್ಲೆಯು ಭೌಗೋಳಿಕವಾಗಿ ಚಿನ್ಮೂಲಾದ್ರಿ ಪರ್ವತಗಳಿಂದ ಆವೃತ್ತಗೊಂಡ ಅರೆಮಲೆನಾಡು ಮತ್ತು ಬಯಲು ಸೀಮೆಯಿಂದ ಕೂಡಿದ ಭೂಪ್ರದೇಶವಾಗಿದೆ. ಜಿಲ್ಲೆಯ ಹಲವಾರು ಪ್ರದೇಶಗಳಲ್ಲಿ ಹಳೆ ಶಿಲಾಯುಗದಿಂದ ಬೃಹತ್ ಶಿಲಾಯುಗದವರೆಗಿನ ಅವಶೇಷಗಳು ಕಂಡುಬಂದಿವೆ. ಪ್ರಸ್ತುತ ಲೇಖನದಲ್ಲಿ ಹೊಸದುರ್ಗ ಮತ್ತು ಹೊಳಲ್ಕೆರೆ ತಾಲೂಕಿನಲ್ಲಿ ಕಂಡುಬರುವ ಬೃಹತ್ ಗಣೇಶ ಮೂರ್ತಿಶಿಲ್ಪಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ. ವಿಶೇಷವಾಗಿ ಈ ಎರಡೂ ಪ್ರದೇಶಗಳಲ್ಲೂ ಕಂಡು ಬರುವ ಬೃಹತ್ ಗಣೇಶ ಮೂರ್ತಿಶಿಲ್ಪಗಳು ಆಕರ್ಷಣೀಯವಾಗಿದ್ದು ಜನರ ಗಮನವನ್ನು ಸೆಳೆಯುವಂತಿವೆ.*

***Keywords:*** *ಪ್ರಾಚ್ಯಾವಶೇಷ, ಶಾಸನಗಳು, ದೇವಾಲಯ, ಬೃಹತ್ ಗಣೇಶ ಶಿಲ್ಪಗಳು, ಉಬ್ಬು ಶಿಲ್ಪಗಳು.*

## ಪೀಠಿಕೆ

ಚಿತ್ರದುರ್ಗ ಜಿಲ್ಲೆಯು ಶಾತವಾಹನ, ಕದಂಬ, ಗಂಗ, ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ, ನೊಳಂಬ, ಉಚ್ಚಂಗಿಪಾಂಡ್ಯ, ವಿಜಯನಗರ, ಪಾಳೆಯಗಾರರು, ಶ್ರೀರಂಗಪಟ್ಟಣದ ನವಾಬರು, ಮೈಸೂರಿನ ಒಡೆಯರು ಮತ್ತು ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿತ್ತು. ಇದಕ್ಕೆ ಪೂರಕವೆಂಬಂತೆ ಅಸಂಖ್ಯಾತ ಪ್ರಾಚ್ಯಾವಶೇಷಗಳು, ದೇವಾಲಯಗಳು, ಶಿಲ್ಪಗಳು, ವೀರಗಲ್ಲುಗಳು, ಮಹಾಸತಿಗಲ್ಲುಗಳು, ಶಾಸನಗಳು, ನಾಣ್ಯಗಳು ದೊರೆತಿವೆ. ಹೊಸದುರ್ಗ ಮತ್ತು ಹೊಳಲ್ಕೆರೆ ನಗರಗಳು ಪ್ರಸ್ತುತ ತಾಲೂಕು ಕೇಂದ್ರಗಳಾಗಿವೆ. ಕಲ್ಯಾಣ ಚಾಲುಕ್ಯ, ಪಾಳೆಯಗಾರರಕಾಲದಿಂದ ಸೈನಿಕ, ಆಡಳಿತ ಕೇಂದ್ರಗಳಾಗಿಯೂ ಐತಿಹಾಸಿಕ ಮಹತ್ವವನ್ನು ಹೊಂದಿದೆ. ಈ ಎರಡು ನಗರಗಳಲ್ಲಿ ಹಲವಾರು ದೇವಾಲಯಗಳು, ಶಾಸನಗಳು, ವೀರಗಲ್ಲುಗಳು ಮತ್ತು ಮೂರ್ತಿಶಿಲ್ಪಗಳಿದ್ದು ಹಿಂದಿನ ಇತಿಹಾಸವನ್ನು ತಿಳಿಸುತ್ತವೆ.

ಪ್ರಥಮ ಪೂಜಿತನಾದ ಗಣಪತಿಯು ಶಿವ ಪರಿವಾರದ ಶಿಲ್ಪಗಳಲ್ಲಿ ಒಂದಾಗಿದೆ. ಗಣಪತಿ ಶಿಲ್ಪವು ಸಾಮಾನ್ಯವಾಗಿ ಎಲ್ಲಾ ದೇವಾಲಯಗಳಲ್ಲಿ ಇರುತ್ತದೆ. ವೈದಿಕ ಸಾಹಿತ್ಯದಲ್ಲಿ, ಪುರಾಣಗಳಾದ ಬ್ರಹ್ಮವೈವಾರ್ತ, ಮುದ್ಗಲ, ಶಿವ, ಬ್ರಹ್ಮಾಂಡ, ಗಣೇಶ, ವರಹಾ, ಭವಿಷ್ಯ ಮತ್ತು ಸ್ಕಂಧ ಪುರಣಗಳಲ್ಲಿ ಗಣೇಶನನ್ನು ಕುರಿತು ಅನೇಕ ಕಥೆಗಳಿವೆ. ಆಗಮಗಳು, ಸಂಹಿತೆಗಳಲ್ಲಿಯು ಗಣೇಶನ ಕುರಿತ ಕಥಾವಳಿಗಳು

***Please cite this article as:*** ವೆಂಕಟೇಶ ಹೆಚ್ ಮತ್ತು ಸರ್ವಮಂಗಳ. (2024). ಹೊಸದುರ್ಗ ಮತ್ತು ಹೊಳಲ್ಕೆರೆಯ ಬೃಹತ್ ಗಣೇಶ ಶಿಲ್ಪಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 3(2), 162–168

ಕಂಡುಬರುತ್ತವೆ. ಪುರಾಣಗಳು 32 ರೂಪದ ವಿನಾಯಕನನ್ನು ಹೆಸರಿಸಿವೆ.[1]

### ಹೊಸದುರ್ಗದ ಬೃಹತ್ ಗಣೇಶ ಶಿಲ್ಪ

ಹೊಸದುರ್ಗದ ಬೃಹತ್ ಗಣೇಶ ಶಿಲ್ಪವು ಪ್ರಸ್ತುತ ಹೊಸದುರ್ಗ ನಗರದ ಹಳೆಯ ತಾಲೂಕು ಕಛೇರಿಯ ಮುಂಭಾಗದಲ್ಲಿ ಪಶ್ಚಿಮಾಭಿಮುಖವಾಗಿ ಪ್ರತಿಷ್ಠಾಪಿತವಾಗಿದೆ. ಇತ್ತೀಚೆಗೆ ಈ ಮೂರ್ತಿಶಿಲ್ಪದ ಸುತ್ತಲೂ ಕಲ್ಲು, ಇಟ್ಟಿಗೆ, ಮಾರ್ಬಲ್ ಶಿಲೆ ಮತ್ತು ಸಿಮೆಂಟ್‌ನ್ನು ಬಳಸಿ ಅಷ್ಟಕೋನಾಕೃತಿಯ ಚಿಕ್ಕ ಮಂಟಪವನ್ನು ನಿರ್ಮಿಸಲಾಗಿದೆ. ಗಣೇಶನ ಶಿಲ್ಪವು ಮೂಲತಃ ಹೊಸದುರ್ಗ ತಾಲೂಕಿನ ನೀರಗುಂದ ಗ್ರಾಮದ ಪಶ್ಚಿಮ ಭಾಗದಲ್ಲಿ ಪೂರ್ವಾಭಿಮುಖವಾಗಿ ನಿರ್ಮಿಸಿರುವ ಗಂಗೇಶ್ವರ ದೇವಾಲಯದಲ್ಲಿದ್ದಂತಹ ಶಿಲ್ಪವಾಗಿದೆ. ನೀರಗುಂದವು ಗಂಗ, ಹೊಯ್ಸಳ, ನೊಳಂಬ, ಪಲ್ಲವರ ಆಳ್ವಿಕೆಯಲ್ಲಿ ವ್ಯಾಪಾರ ಮತ್ತು ಧಾರ್ಮಿಕ ಕೇಂದ್ರವಾಗಿ ಖ್ಯಾತಿಪಡೆದಿದ್ದು, ಹೊಯ್ಸಳರ ಕಾಲದಲ್ಲಿ ಪ್ರಮುಖ ಅಗ್ರಹಾರವಾಗಿತ್ತು.[2] ಗಣೇಶ ಮೂರ್ತಿಶಿಲ್ಪವು ಯಾವ ಕಾಲದಲ್ಲಿ ರಚನೆಯಾಯಿತು ಎನ್ನುವುದರ ಬಗ್ಗೆ ಖಚಿತ ದಾಖಲೆಗಳಿಲ್ಲ. ಇತ್ತೀಚೆಗೆ ಈ ಶಿಲ್ಪವನ್ನು ನೀರಗುಂದದಿಂದ ಹೊಸದುರ್ಗಕ್ಕೆ ಸ್ಥಳಾಂತರಿಸಿ ಪುಟ್ಟ ಮಂಟಪದಲ್ಲಿ ಪ್ರತಿಷ್ಠಾಪಿಸಲಾಯಿತು ಎಂದು ಬಾಗೂರು ನಾಗರಾಜಪ್ಪನವರು ತಿಳಿಸಿದ್ದಾರೆ.[3] ಈ ಶಿಲ್ಪವು ನೀಲಿಮಿಶ್ರಿತ ಕಪ್ಪು ಬಣ್ಣದ ಬಳಪದ ಶಿಲೆಯಲ್ಲಿ ಮಾಡಲಾದ ಏಕಶಿಲಾ ಮೂರ್ತಿಯಾಗಿದೆ. ಇದು ಒಟ್ಟು 7 ½ ಅಡಿ ಎತ್ತರ, 4 ಅಡಿ ಅಗಲ, 10 ಅಡಿ ಸುತ್ತಳತೆಯನ್ನು ಹೊಂದಿದೆ. ಇದರಲ್ಲಿ 1 ½ ಅಡಿ ಪೀಠ, 6 ಅಡಿ ಎತ್ತರದ ಗಣೇಶನ ಮೂರ್ತಿಯಿದೆ. ಗಣೇಶನು ಸುಖಾಸೀನ ಭಂಗಿಯಲ್ಲಿದ್ದು ತನ್ನ ಬಲಗಾಲಿನ ಮಂಡಿಯನ್ನು ಎತ್ತಿ ಪಾದವನ್ನು ಪೀಠದ ಮೇಲೆ ಸ್ಥಿರಪಾದವಾಗಿರಿಸಿರುವನು, ಎಡಗಾಲನ್ನು ಮಡಚಿ ಮುಂಪಾದವನ್ನು ಪೀಠದ ಮೇಲಿರಿಸಿದ್ದಾನೆ. ಚತುರ್ಭುಜನಾಗಿದ್ದು ತನ್ನ ಹಿಂದಿನ ಬಲಗೈನಲ್ಲಿ ಅಂಕುಶವನ್ನು, ಎಡಗೈಯಲ್ಲಿ ಪಾಶವನ್ನು, ಮುಂದಿನ ಬಲಗೈಯಲ್ಲಿ ವ್ಯಾಖ್ಯಾನ ಮುದ್ರೆಯಲ್ಲಿ ದಂತವನ್ನು ಮತ್ತು ಎಡಗೈಯಲ್ಲಿ ಫಲಪಾತ್ರೆ ಹಿಡಿದಿರುವನು. ಗಜಮುಖನಾಗಿದ್ದು ವಿಶಾಲವಾದ ಕಣ್ಣುಗಳನ್ನು ಮತ್ತು ಕರ್ಣಗಳನ್ನು ಹೊಂದಿರುವನು. ಎಡಮುರಿಯಾಗಿದ್ದು ಸೊಂಡಿಲು ಫಲ ಪಾತ್ರೆಗೆ ತಾಗಿಸಿದಂತಿದೆ, ಬಲ ದಂತವು ವಕ್ರವಾಗಿ, ಎಡ ದಂತವು ಚೂಪಾಗಿದೆ. ಗಣೇಶನು ಕಂಠಿಹಾರ, ತ್ರಿವಳಿಯ ಉದ್ದವಾದ ಉರಹಾರ, ಯಜ್ಞೋಪವೀತ, ಹೊಟ್ಟೆಯನ್ನು ಸುತ್ತುವರಿದ ನಾಗಬಂದವನ್ನು, ತೋಳುಗಳಲ್ಲಿ ಕೇಯೂರ, ಕೈಗಳಲ್ಲಿ ಕಂಕಣ, ಪಾದಗಳಲ್ಲಿ ಪಾದಜಾಲ ಮುಂತಾದ ಆಭರಣಗಳಿಂದ ಅಲಂಕೃತಗೊಂಡಿರುವನು. ಪೀಠದಲ್ಲಿ ಇಲಿಯ ಉಬ್ಬು ಶಿಲ್ಪವಿದೆ. ಲತಾಬಳ್ಳಿಗಳಿಂದ ಅಲಂಕೃತಗೊಂಡ ಕೀರ್ತಿಮುಖವಿರುವ ಸುಂದರ ಪ್ರಭಾವಳಿಯನ್ನು ಕೆತ್ತಲಾಗಿದೆ. ಶಿಲ್ಪದಲ್ಲಿರುವ ಆಯುಧಗಳ ಆಧಾರದ ಪ್ರಕಾರ ಇದು ಪ್ರಸನ್ನ ಗಣಪತಿ ಶಿಲ್ಪವಾಗಿದೆ.

### ಹೊಳಲ್ಕೆರೆಯ ಬಯಲು ಗಣಪತಿ ಶಿಲ್ಪ

ಚಿತ್ರದುರ್ಗ ಜಿಲ್ಲೆಯ ತಾಲೂಕು ಕೇಂದ್ರವಾದ ಹೊಳಲ್ಕೆರೆ ಪ್ರಾಚೀನ ಐತಿಹಾಸಿಕ ಸ್ಥಳವಾಗಿದೆ. ಪ್ರಾಗೈತಿಹಾಸದ ಚರಿತ್ರೆಯ ಜೊತೆಗೆ ರಾಷ್ಟ್ರಕೂಟ ಮತ್ತು ಹೊಯ್ಸಳರ ಕಾಲದಿಂದ ಸ್ಥಳೀಯ ಪಾಳೆಯಗಾರರ ಕಾಲದವರೆಗೆ ಚಾರಿತ್ರಿಕ ಮಹತ್ವವನ್ನು ಹೊಂದಿದೆ ಸಾ.ಶ 1435ರಲ್ಲಿ ವಿಜಯನಗರದ ಅರಸರು ತಿಮ್ಮಣ್ಣನಾಯಕನಿಗೆ (ಮತ್ತಿ) ಹೊಳಲ್ಕೆರೆಯ ಅಮರನಾಯಕನಾಗಿ ಬಡ್ತಿ ನೀಡಿ ಚಿತ್ರದುರ್ಗ

---

[1] ರಾಮಚಂದ್ರರಾವ್ ಸಾ.ಕೃ.(2013). *ಮೂರ್ತಿಶಿಲ್ಪ ನೆಲೆ–ಹಿನ್ನೆಲೆ.* ಪುಟ. 149

[2] ರೈಸ್ ಬಿ. ಎಲ್. (1903). *ಎಪಿಗ್ರಫಿಯಾ ಕರ್ನಾಟಿಕ ಸಂಪುಟ–11 (ಚಿತ್ರದುರ್ಗ ಜಿಲ್ಲೆ).* ಪುಟ. 133,134

[3] ಬಾಗೂರು ನಾಗರಾಜಪ್ಪ. (1984). *ಹೊಸದುರ್ಗದ ಸುತ್ತ.* ಪುಟ. 34

ಪ್ರದೇಶಕ್ಕೆ ನಾಯಕನೆಂದು ನೇಮಿಸಿದರು.[4] ಸಂತೆಬೆನ್ನೂರು, ಬಸವಪಟ್ಟಣದ ಪಾಳೆಯಗಾರರ ಆಳ್ವಿಕೆಗೂ ಒಳಪಟ್ಟಿತ್ತು. ಈ ಕಾಲದಲ್ಲಿ ಇಲ್ಲಿ ಹಲವಾರು ದೇವಾಲಯಗಳು ನಿರ್ಮಾಣಗೊಂಡಿವೆ. ಹೊಳಲ್ಕೆರೆಯ ಗೋಪಾಲಕೃಷ್ಣ ದೇವಾಲಯದ ಒಂದು ಕಂಬದಲ್ಲಿರುವ ಸಾ.ಶ.1568ರ ಶಾಸನದಲ್ಲಿ ವಿಜಯನಗರದ ಅರಸ ತಿರುಮಲರಾಯದೇವನು ಕಾಮಗೇತ ಮದಕೇರಿ (ಮದಕರಿ) ನಾಯಕನನ್ನು ಚಿತ್ರದುರ್ಗ ಪ್ರದೇಶಕ್ಕೆ ಅಮರನಾಯಕನಾಗಿ ನೇಮಿಸಿ ಹೊಳಲ್ಕೆರೆಯನ್ನು ಅಮರಮಾಗಣಿಯಾಗಿ ನೀಡಿದನು. ಕಾಮಗೇತ ಮದಕೇರಿ ನಾಯಕನು ತನ್ನ ಭಾವಮೈದುನನಾದ ಗುಲ್ಲಿಯಪ್ಪನಾಯಕನಿಗೆ ಹೊಳಲ್ಕೆರೆಯನ್ನು ಉಂಬಳಿಯಾಗಿ ನೀಡಿದನು.[5]ಹೀಗೆ ಪಾಳೆಯಗಾರರ ಅಧೀನದಲ್ಲಿ ಹೊಳಲ್ಕೆರೆ ಹೆಚ್ಚು ಮುನ್ನೆಲೆಗೆ ಬಂದಿತು.

ಪ್ರಸ್ತುತ ಹೊಳಲ್ಕೆರೆ ಪಟ್ಟಣದ ಉತ್ತರದ ಭಾಗದಲ್ಲಿರುವ ಕೆರೆಯ(ಹೊನ್ನೆಕೆರೆ) ಸಮೀಪದಲ್ಲಿ ಬೃಹತ್ ಗಾತ್ರದ ಗಣಪತಿಯ ಮೂರ್ತಿಶಿಲ್ಪವಿದೆ. ಪೂರ್ವಾಭಿಮುಖವಾಗಿ ಪ್ರತಿಷ್ಠಾಪನೆಗೊಂಡಿರುವ ಈ ಶಿಲ್ಪವು ಆಕರ್ಷಣೀಯವಾಗಿದೆ. ಇದು ಯಾವುದೇ ಮಂಟಪವಿಲ್ಲದೆ ಬಯಲಿನಲ್ಲಿ ಇರುವುದರಿಂದ ಬಯಲು ಗಣಪತಿ ಎಂದೇ ಪ್ರಸಿದ್ಧ ಪಡೆದಿದೆ. ಇತ್ತೀಚೆಗೆ ಈ ಶಿಲ್ಪದ ಸುತ್ತಲೂ ವಿಶಾಲವಾದ ಆಯತಾಕಾರದ ಬೃಹತ್ ಮಂಟಪವನ್ನು, ಶಿಖರ ಮತ್ತು ಮಹಾ ಗೋಪುರವನ್ನು ನಿರ್ಮಿಸಿ ಜೀರ್ಣೋದ್ಧಾರಗೊಳಿಸಲಾಗಿದೆ. ಈ ಗಣೇಶನ ಆಲಯವು ತಾಲೂಕು ಸೇರಿದಂತೆ ಜಿಲ್ಲೆಯಾದ್ಯಂತ ಪ್ರಸಿದ್ಧಿ ಹೊಂದಿದ್ದು ಪ್ರತಿನಿತ್ಯ ಶಿಲ್ಪವನ್ನು ಸುಂದರವಾಗಿ ಆಲಂಕರಿಸಿ ಪೂಜಾಕೈಂಕರ್ಯಗಳನ್ನು ನಡೆಸುತ್ತಾರೆ. ಈ ಆಲಯದ ನಿರ್ವಹಣೆಗೆ ಪ್ರತ್ಯೇಕ ಆಡಳಿತಮಂಡಳಿ ಇದೆ.

ಗಣಪತಿ ಮೂರ್ತಿಶಿಲ್ಪವು ಏಕಶಿಲಾ ಮೂರ್ತಿಯಾಗಿದ್ದು, ಗ್ರಾನೈಟ್ ಶಿಲೆಯನ್ನು (ಕಣಶಿಲೆ) ಬಳಸಿ ಸುಂದರವಾಗಿ ರಚಿಸಲಾಗಿದೆ. ಈ ಶಿಲ್ಪವು 12 ½ ಅಡಿ ಎತ್ತರ, 6 ½) ಅಡಿ ಅಗಲವಿದೆ ಅದರಲ್ಲಿ 2 ½ ಅಡಿ ಎತ್ತರದ ಪೀಠದ ಮೇಲೆ 10 ಅಡಿಗಳಷ್ಟು ಎತ್ತರದ ಗಣೇಶನ ಮೂರ್ತಿ ಶಿಲ್ಪವನ್ನು ಕೆತ್ತಲಾಗಿದೆ. ಗಣೇಶನು ಆಸೀನ ಭಂಗಿಯಲ್ಲಿದ್ದು ತನ್ನ ಬಲಗಾಲನ್ನು ಪೀಠದ ಮೇಲೆ ಸ್ಥಿರಪಾದವಾಗಿರಿಸಿ, ಎಡಗಾಲನ್ನು ಮಡಚಿ ಅರ್ಧಪರ್ಯಂಕಾಸನದಲ್ಲಿ ಆಸೀನನಾಗಿರುವನು, ಚತುರ್ಭುಜನಾಗಿದ್ದು ಹಿಂದಿನ ಬಲಗೈನಲ್ಲಿ ಪರಶುವನ್ನು ಎಡಗೈನಲ್ಲಿ ಪಾಶವನ್ನು ಹಿಡಿದಿರುವನು. ಗಜಮುಖನಾಗಿದ್ದು ವಿಶಾಲವಾದ ಕಣ್ಣುಗಳನ್ನು, ಕರ್ಣಗಳನ್ನು ಹೊಂದಿರುವನು. ಸೊಂಡಿಲು ಎಡಮುರಿಯಾಗಿದ್ದು ತನ್ನ ಎಡಗೈಯಲ್ಲಿರುವ ಮೋದಕಗಳನ್ನು ತಾಗಿರುವಂತೆ ಕೆತ್ತಲಾಗಿದೆ. ಬಲದಂತವು ವಕ್ರವಾಗಿ, ಎಡದಂತವು ಚೂಪಾಗಿದೆ. ತಲೆಯ ಮೇಲೆ ಕರಂಡ ಮುಕುಟವನ್ನು, ಎರಡೂ ಕಿವಿಗಳಲ್ಲಿ ಒಂದೊಂದು ಘಂಟೆಯನ್ನು, ಕತ್ತಿನಲ್ಲಿ ಕಂಠೀಹಾರ, ಪದಕದಹಾರ, ಯಜ್ಞೋಪವೀತ ಉದರಬಂದ, ನಾಗಬಂದ ಮತ್ತು ಎಡಗಾಲಿನ ಮೇಲೆ ಹಾದು ಪೀಠದವರೆಗೆ ಇಳಿಬಿದ್ದಂತೆ ಉದ್ದವಾದ ವೈಜಯಂತಿಮಾಲೆ, ಭುಜದಲ್ಲಿ ಭುಜಕೀರ್ತಿ, ತೋಳುಗಳಲ್ಲಿ ಕೇಯೂರ, ಕೈಕಡಗಗಳು ಕಾಲ್ಗಳಲ್ಲಿ ಕಾಲ್ಕಡಗಗಳನ್ನು ಮತ್ತು ಪಾದಜಾಲಗಳನ್ನು ಧರಿಸಿ ಸರ್ವಾಭರಣಗಳಿಂದ ಅಲಂಕೃತನಾಗಿರುವನು. ಪೀಠದಲ್ಲಿ ಗಣೇಶನ ವಾಹನ ಇಲಿಯ ಉಬ್ಬು ಶಿಲ್ಪವಿದೆ. ಈ ಶಿಲ್ಪದಲ್ಲಿರುವ ವಿಶೇಷತೆಗಳು ಏನೆಂದರೆ ಗಣೇಶನ ಹಿಂಭಾಗವು ಸ್ತ್ರೀ ರೂಪದಲ್ಲಿದೆ, ನೀಳವಾದ ಜಡೆಯನ್ನು ಹೊಂದಿದ್ದು ವೃತ್ತಾಕಾರ ಪದ್ಮಬಿಲ್ಲೆಯನ್ನು ಮತ್ತು ಮುತ್ತಿನ ಕುಚ್ಚನ್ನು ಹಾಕಿ ಜಡೆಯನ್ನು ಸುಂದರವಾಗಿ ಅಲಂಕರಿಸಲಾಗಿದೆ. ಗಣೇಶ ಎಡ ಕಂಕುಳಲ್ಲಿ ನರಸಿಂಹನ ಸಣ್ಣ ಮುಖದ ಶಿಲ್ಪವನ್ನು ಕೆತ್ತಲಾಗಿದೆ. ಶಿಲ್ಪವು ಲತಾಬಳ್ಳಿಗಳಿಂದ ಅಲಂಕೃತವಾದ ಕೀರ್ತಿಮುಖವಿರುವ ಸುಂದರ

[4] ಸೋಮಶೇಖರ್ ಎಸ್. ವೈ. (2021). *ಹೊಳಲ್ಕೆರೆ.* ಪುಟ.12

[5] ರೈಸ್ ಬಿ. ಎಲ್. (1903). ಪೂರ್ವೋಕ್ತ. ಪುಟ. 116

ಪ್ರಭಾವಳಿಯನ್ನು ಹೊಂದಿದೆ ಹಾಗೂ ಶಿಲ್ಪದ ಪೀಠದಲ್ಲಿ ಒಂದು ಸಾಲಿನ ಶಾಸನವಿದೆ.

ಈ ಬೃಹತ್ ಗಣಪತಿಯನ್ನು ಸ್ಥಳೀಯರು 'ಬಯಲು ಗಣಪತಿ' 'ಪ್ರಸನ್ನ ಗಣಪತಿ' ಎಂದು ಕರೆಯುವರು. ಬಿ.ಎಲ್.ರೈಸ್ ರವರು 'ಎಪಿಗ್ರಫಿಯಾ ಕರ್ನಾಟಿಕ ಸಂಪುಟ–11' ರಲ್ಲಿ ಹೊಳಲ್ಕೆರೆಯ ಶಾಸನ ಸಂಖ್ಯೆ 6ರ ಶೀರ್ಷಿಕೆಯಲ್ಲಿ 'ತೂಗುದಲೆ ಗಣಪತಿ' ಎಂದು ಕರೆದಿದ್ದಾರೆ.[6] ಈ 'ತೂಗುದಲೆ' ಎಂಬ ವಿಶೇಷಣಕ್ಕೆ ನಿರ್ದಿಷ್ಟ ಅರ್ಥ ಮತ್ತು ಇದು ಬಂದ ಹಿನ್ನೆಲೆ ಏನು ಎಂಬುದು ಈಗಲೂ ಅಸ್ಪಷ್ಟವಾಗಿದೆ. ಈ ಗಣಪತಿಯ ತಲೆಯ ಹಿಂದೆ ಸುಂದರವಾದ ತುರುಬಿನ ಅಲಂಕಾರ, ಅದರಿಂದ ಇಳಿಬಿದ್ದು ತೂಗುತ್ತಿರುವಂತಹ ಮುತ್ತಿನ ಕುಚ್ಚು ಇವುಗಳ ಕೆತ್ತನೆ ಇದೆ. ಈ 'ತೂಗುಕುಚ್ಚು' ಇರುವುದರಿಂದ 'ತೂಗುದಲೆ' ಎಂಬ ಹೆಸರು ಬಂದಿರಬಹುದೊ ಏನೊ ಎಂದು ಬಿ.ರಾಜಶೇಖರಪ್ಪನವರು ತಿಳಿಸಿದ್ದಾರೆ.[7] ಈ ಗಣಪತಿಯನ್ನು ಯಾವುದೇ ಮಂಟಪ, ಆಲಯವಿಲ್ಲದೆ ಬಯಲಿನಲ್ಲಿ ಪ್ರತಿಷ್ಠಾಪಿಸಿದ್ದರಿಂದ 'ಬಯಲು ಗಣಪತಿ' ಎಂಬ ಹೆಸರು ಬಂದಿದೆ. ಈ ಶಿಲ್ಪದಲ್ಲಿ ಗಣೇಶನು ತನ್ನ ಹಿಂದಿನ ಬಲಗೈಯಲ್ಲಿ ಪರಶುವನ್ನು ಹಿಡಿದಿರುವುದು ಪರಶುರಾಮನೊಂದಿಗೆ ಮುಖಾಮುಖಿಯಾದ ಸಂಗತಿಯನ್ನು ತಿಳಿಸುತ್ತದೆ. ವರಹ ಪುರಾಣದಲ್ಲಿ– ಗಣೇಶನು ಪರಶುವನ್ನು ಹಿಡಿದಿರುವ ಬಗ್ಗೆ ಉಲ್ಲೇಖವಿದೆ.[8] ಶಿಲ್ಪಶಾಸ್ತ್ರದ ಪ್ರಕಾರ ವೀರ ವಿಘ್ನೇಶ್ವರ ಹದಿನಾರು ಕೈಗಳನ್ನು ಹೊಂದಿದ್ದು ತನ್ನ ಒಂದು ಕೈಯಲ್ಲಿ ಪರಶುವನ್ನು ಹಿಡಿದಿರುವನು.[9] ಹೇರಂಬ ಗಣಪತಿ ಐದು ಮುಖಗಳನ್ನು ಹೊಂದಿದ್ದು ತನ್ನ ಒಂದು ಕೈಯಲ್ಲಿ ಪರಶುವನ್ನು ಹಿಡಿದಿರುವನು.[10] ಕುಂಬಕೋಣಂನ ನಾಗೇಶ್ವರಸ್ವಾಮಿ ದೇವಾಲಯದಲ್ಲಿನ ಉಚ್ಛಿಷ್ಟ ಗಣಪತಿಯು ಅಷ್ಟಭುಜನಾಗಿದ್ದು ತನ್ನ ಎಡ ಕೈಯಲ್ಲಿ ಪರಶುವನ್ನು ಹಿಡಿದಿರುವನು, ಹಾಗೆಯೇ ನಾಗಪಟನ ನೀಲಯಟಕ್ಷಿಯಮ್ಮನ ದೇವಾಲಯದಲ್ಲಿನ ಹೇರಂಬ ಗಣಪತಿಯು ತನ್ನ ಒಂದು ಕೈಯಲ್ಲಿ ಪರಶುವನ್ನು ಹಿಡಿದಿರುವನು.[11] ಈ ಹಿನ್ನೆಲೆಯಲ್ಲಿ ಹೊಳಲ್ಕೆರೆಯ ಗಣಪತಿಯು ವೀರ ಗಣಪತಿಯೂ ಆಗಿರುವನು, ಉಗ್ರನರಸಿಂಹ ಪಾಳೆಯಗಾರರ ಆರಾಧ್ಯ ದೈವನಾಗಿದ್ದರಿಂದ ಗಣೇಶನ ಎಡಭಾಗದಲ್ಲಿ ಉಗ್ರನರಸಿಂಹನ ಮುಖದ ಚಿಕ್ಕ ಶಿಲ್ಪವನ್ನು ಕೆತ್ತಲಾಗಿದೆ ಅಲ್ಲದೆ ನರಸಿಂಹ ಶಿಲ್ಪವಿರುವ ಈ ಗಣೇಶನನ್ನು ಪೂಜಿಸುವುದರಿಂದ ಋಜದೋಷ ನಿವಾರಣೆಯಾಗುವುದೆಂಬ ಧಾರ್ಮಿಕ ನಂಬಿಕೆ ಸ್ಥಳೀಯರಲ್ಲಿದೆ. ಶಿಲ್ಪದ ಹಿಂಭಾಗವು ಸ್ತ್ರೀಯ ರೂಪವಿರುದರಿಂದ ಶಕ್ತಿ ಗಣಪತಿಯೂ ಆಗಿದೆ. ಈ ಎಲ್ಲಾ ವಿಶೇಷತೆಗಳಿಂದ ಬಯಲು ಗಣೇಶನು ಕರ್ನಾಟಕದ ಗಣೇಶ ಶಿಲ್ಪಗಳಲ್ಲಿಯೇ ವಿಶೇಷವಾದ ಶಿಲ್ಪವಾಗಿದೆ.

ಈ ಶಿಲ್ಪವನ್ನು ಯಾರು ಯಾವ ಕಾಲದಲ್ಲಿ ನಿರ್ಮಿಸಿದ್ದರು ಎಂಬುದನ್ನು ಶಿಲ್ಪದ ಪೀಠದಲ್ಲಿರುವ ಶಾಸನ ಸ್ಪಷ್ಟಪಡಿದುತ್ತದೆ. ಈ ಶಾಸನ ಸುಮಾರು 29 ಅಂಗಲು ಉದ್ದ 3 ಅಂಗಲು ಎತ್ತರ ಅಳತೆಯ ಹರಹಿನಲ್ಲಿ ಕೆತ್ತಿರುವ ಈ ಶಾಸನದ ಪಾಠ ಇರುವುದು ಹೀಗೆ 'ಕಾಮಗೇತ ಮೆದಕೇರಿನಾಯಕ ಮೈದುನ ಗುಲ್ಯಪನಾಯಕ ಸೇವೆ'.[12] ಈ ಶಾಸನದ ಪ್ರಕಾರ 'ಗುಲ್ಯಪನಾಯಕ' ಈ ಶಿಲ್ಪವನ್ನು ಕೆತ್ತಿಸಿ ಪ್ರತಿಷ್ಠಾಪಿಸಿದನೆಂದು ತಿಳಿದುಬರುತ್ತದೆ. ಈ ಶಿಲ್ಪದಲ್ಲಿರುವ ಶಾಸನದ ಲಿಪಿಯ ಆದಾರದ ಮೇಲೆ ಇದು 16ನೇ ಶತಮಾನದೆಂದು ಬಿ.ರಾಜಶೇಖರಪ್ಪ

---

[6] *ಅದೇ.* ಪುಟ. 196

[7] ರಾಜಶೇಖರಪ್ಪ ಬಿ. (2009). *ದುರ್ಗಶೋಧನ.* ಪುಟ. 103

[8] ರಾಮಚಂದ್ರರಾವ್ ಸಾ.ಕೃ.(2013).*ಪೂರ್ವೋಕ್ತ.* ಪುಟ. 140

[9] *ಗೋಪಿನಾಥರಾವ್.ಟಿ.ಎ.* (2021). *ಎಲಿಮೆಂಟ್ಸ ಆಫ್ ಹಿಂದೂ ಐಕನೋಗ್ರಫಿ.* ಪುಟ. 52

[10] *ಅದೇ.* ಪುಟ–57

[11] *ಅದೇ.* ಪುಟ.65

[12] ರಾಜಶೇಖರಪ್ಪ ಬಿ. (2009). *ಪೂರ್ವೋಕ್ತ.* ಪುಟ. 105

ರವರು ತಿಳಿದಿದ್ದಾರೆ[13]. ಆದರೆ ಈ ದೇವಾಲಯದ ಆಡಳಿತ ಮಂಡಳಿಯವರನ್ನು ಸಂದರ್ಶಿಸಿದಾಗ ಈ ಶಿಲ್ಪವು ಸಾ.ಶ.1475 ರಲ್ಲೇ ಗುಲ್ಯಪನಾಯಕ ನಿಂದ ನಿರ್ಮಾಣವಾಗಿತ್ತು ಎಂದು ತಿಳಿಸಿದ್ದಾರೆ. ಈ ಶಿಲ್ಪದ ಶಾಸನದಲ್ಲಿ ಉಲ್ಲೇಖವಿರುವ 'ಗುಲ್ಯಪನಾಯಕನ' ಹೆಸರು ಸಾ.ಶ.1568 ರ ಹೊಳಲ್ಕೆರೆಯ ಶಾಸನದಲ್ಲೂ ಉಲ್ಲೇಖವಾಗಿರುವುದರಿಂದ ಸಾ.ಶ.1475 ರಿಂದ 1570ರ ಮಧ್ಯೆ ಇದು ರಚನೆಗೊಂಡಿರಬಹುದೆಂದು ತಿಳಿದುಬರುತ್ತದೆ.

**ವಿಶ್ಲೇಷಣೆ**

ಚಿತ್ರದುರ್ಗ ಜಿಲ್ಲೆಯಲ್ಲಿ ಗಣೇಶನ ಆರಾಧನೆಯು ವ್ಯಾಪಕವಾಗಿದೆ. ಎಲ್ಲಾ ದೇವಾಲಯಗಳಲ್ಲಿ ಗಣೇಶನ ಮೂರ್ತಿಶಿಲ್ಪಗಳನ್ನು ಪ್ರತಿಷ್ಠಾಪಿಸಿರುವುದು, ಕೆಲವು ಚಿಕ್ಕ ಗುಡಿಗಳನ್ನು ನಿರ್ಮಿಸಿರುವುದು ಮತ್ತು ಪ್ರತ್ಯೇಕವಾದ ಗಣೇಶ ದೇವಾಲಯಗಳಿರುವುದು ಹಾಗೂ ಹೊಸದುರ್ಗ ಮತ್ತು ಹೊಳಲ್ಕೆರೆಯ ಬೃಹತ್ ಮೂರ್ತಿಶಿಲ್ಪಗಳು ಗಣೇಶನ ಆರಾಧನೆಯಿತ್ತು ಎನ್ನುವುದಕ್ಕೆ ಸಾಕ್ಷಿಯಾಗಿವೆ. ಶಿಲ್ಪಗಳ ರಚನಾಶೈಲಿಯು ಒಂದೇ ರೀತಿಯಲ್ಲಿದೆ. ಶಿಲ್ಪಗಳಲ್ಲಿನ ಆಭರಣಗಳ ಕೆತ್ತನೆ ಮತ್ತು ಅಲಂಕಾರಗಳು ಒಂದೇ ರೀತಿಯಲ್ಲಿ ಸರಳವಾಗಿವೆ. ವಿಜಯನಗರದ ಶಿಲ್ಪಗಳನ್ನು ಹೋಲುವಂತಿವೆ. ಆಯುಧಗಳ ರಚನೆ ಮತ್ತು ಡೊಳ್ಳು ಹೊಟ್ಟೆಯ ಕೆತ್ತನೆಗಳು ಒಂದೇ ರೀತಿಯಲ್ಲಿವೆ. ಎರಡೂ ಶಿಲ್ಪಗಳಲ್ಲಿ ಎಡ ದಂತವು ವಕ್ರವಾಗಿರುವುದು ಕಂಡುಬರುತ್ತದೆ. ಹೊಸದುರ್ಗದ ಮೂರ್ತಿಶಿಲ್ಪವು ಕಪ್ಪು ನೀಲಿ ಮಿಶ್ರಿತ ಬಳಪದ ಕಲ್ಲಿನಲ್ಲಿ ರಚನೆಗೊಂಡಿದ್ದು ಇದರ ನಿರ್ಮಾಣದ ಕಾಲದ ಬಗ್ಗೆ ಸ್ಪಷ್ಟತೆಯಿಲ್ಲ. ಹೊಳಲ್ಕೆರೆಯ ಮೂರ್ತಿ ಶಿಲ್ಪವು ಗ್ರಾನೈಟ್ ಶಿಲೆಯಿಂದ ರಚನೆಗೊಂಡಿದೆ. ಇದರ ಪೀಠದಲ್ಲಿರುವ ಶಾಸನ ಇದು ಸಾ.ಶ.1570 ರಲ್ಲಿ ನಿರ್ಮಾಣಗೊಂಡಿದೆ ಎಂಬುದನ್ನು ತಿಳಿಸುತ್ತದೆ. ಇವು ವಿಜಯನಗರ ಸಾಮ್ರಾಜ್ಯ ಕಾಲದ ಹಂಪಿಯ ಬೃಹತ್ ಗಣಪತಿಯ ವಿಗ್ರಹಗಳನ್ನು ನೆನಪಿಗೆ ತರುವಂತಿವೆ. ಪಾಳೆಯಗಾರರು ವಿಜಯನಗರದ ಶಿಲ್ಪಗಳಿಂದ ಪ್ರಭಾವಿತರಾಗಿ (ಗ್ರಾನೈಟ್) ಕಣಶಿಲೆಯನ್ನು ಬಳಸಿ ಹೆಚ್ಚು ಕಲಾತ್ಮಕವಾಗಿ ಏಕಶಿಲಾ ಮೂರ್ತಿಗಳನ್ನು ರಚಿಸಿದ್ದಾರೆ. ಈ ಶಿಲ್ಪವು ಸಹ ಪ್ರತಿಮಾ ಲಕ್ಷಣಗಳಿಗನುಸಾರವಾಗಿ ಮತ್ತು ಆಗಮ ಶಾಸ್ತ್ರಗಳ ಪ್ರಕಾರವೇ ರಚನೆಗೊಂಡಿವೆ. ಹೊಳಲ್ಕೆರೆಯ ಶಿಲ್ಪದ ಎಡಭಾಗದಲ್ಲಿ ಉಗ್ರನರಸಿಂಹನ ಚಿಕ್ಕ ಶಿಲ್ಪವನ್ನು ಕೆತ್ತಿರುವುದು ಈ ಶಿಲ್ಪದ ವಿಶೇಷತೆಯಾಗಿದೆ. ಕರ್ನಾಟಕದ ಯಾವುದೇ ಭಾಗದಲ್ಲಿ ಈ ರೀತಿಯ ಉಗ್ರನರಸಿಂಹನಿರುವ ಗಣೇಶ ಶಿಲ್ಪವು ಕಂಡುಬರುವುದಿಲ್ಲ ಎಂಬುದು ಆಶ್ಚರ್ಯವನ್ನುಂಟು ಮಾಡುತ್ತದೆ. ಅಲ್ಲದೆ ಶಾಸನ ಸಹಿತ ಗಣೇಶ ಶಿಲ್ಪಗಳಲ್ಲಿ ಇದೂ ಒಂದಾಗಿದೆ. ಒಟ್ಟಾರೆಯಾಗಿ ಚಿತ್ರದುರ್ಗ ಜಿಲ್ಲೆಯಲ್ಲಿ 11–16ನೇ ಶತಮಾನದಲ್ಲೇ ಬೃಹತ್ ಗಣೇಶನ ಶಿಲ್ಪಗಳು ರಚನೆಗೊಂಡಿರುವುದು ಈ ಅಧ್ಯಯನದಿಂದ ತಿಳಿದುಬರುತ್ತದೆ.


**ಆಕರ ಗ್ರಂಥಗಳು**

**ಪ್ರಾಥಮಿಕ ಆಕರಗಳು**

- ರೈಸ್ ಬಿ.ಎಲ್. (ಸಂ.) (1903). *ಎಫಿಗ್ರಫಿಯಾ ಕರ್ನಾಟಿಕ ಸಂಪುಟ–11 (ಚಿತ್ರದುರ್ಗ ಜಿಲ್ಲೆ).* ಮೈಸೂರು ಗೌವರ್ನಮೆಂಟ್ ಸೆಂಟ್ರಲ್ ಪ್ರೆಸ್.
- ರೈಸ್ ಬಿ.ಎಲ್. (ಸಂ.) (1904). *ಎಫಿಗ್ರಫಿಯಾ ಕರ್ನಾಟಿಕ ಸಂಪುಟ–12 (ತುಮಕೂರು ಜಿಲ್ಲೆ).* ಮೈಸೂರು ಗೌವರ್ನಮೆಂಟ್ ಸೆಂಟ್ರಲ್ ಪ್ರೆಸ್.

**ಆನುಷಂಗಿಕ ಆಕರಗಳು**

- ಬಾಗೂರು ನಾಗರಾಜಪ್ಪ ಆರ್. (1984). *ಹೊಸದುರ್ಗದ ಸುತ್ತ.* ಅಭಿವ್ಯಕ್ತಿ ವೇದಿಕೆ.
- ಗೋಪೀನಾಥ ರಾವ್ ಟಿ. ಎಡಿಜಿ. (2021). *ಎಲಿಮೆಂಟ್ಸ್ ಆ ಹಿಂದೂ ಐಕನೋಗ್ರಫಿ.* ಮೋತಿಲಾಲ್ ಬನಾರಸಿದಾಸ್ ಪಬ್ಲಿಷಿಂಗ್ ಹೌಸ್.


[13] *ಅದೇ.* ಪುಟ. 105

- ಕುಲಕರ್ಣಿ ಆರ್.ಎಚ್. (ಲೇ.). ಗೋಪಾಲರಾವ್ ಎಚ್.ಎಸ್. (ಪ್ರ.ಸಂ.) (2019). *ವಿಜಯನಗರ ಶಿಲ್ಪಕಲೆ.* ಕರ್ನಾಟಕ ಶಿಲ್ಪಕಲಾ ಅಕಾಡಮಿ.
- ಲಕ್ಷ್ಮಣ ತೆಲಗಾವಿ. (2019). *ಮೌರ್ಯ ಮತ್ತು ಶಾತವಾಹನ ಯುಗ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ರಾಜಶೇಖರಪ್ಪ ಬಿ. (2009). *ದುರ್ಗಶೋಧನ.* ಕನ್ನಡ ಸಾಹಿತ್ಯ ಪರಿಷತ್.
- ರಾಮಚಂದ್ರ ರಾವ್ ಎಸ್. ಕೆ. (1991). *ಪ್ರತಿಮಾ ಕೋಶ ವಾಲ್ಯೂಮ್–2.* ಕಲ್ಪತರು ರಿಸರ್ಚ್ ಅಕಾಡೆಮಿ.
- ರಾಮಚಂದ್ರ ರಾವ್ ಸಾ. ಕೃ. (2013). *ಮೂರ್ತಿಶಿಲ್ಪ ನೆಲೆ–ಹಿನ್ನೆಲೆ.* ಸುರಮಾ ಪ್ರಕಾಶನ.
- ಸೋಮಶೇಖರ್ ಎಸ್. ವೈ. (2021). *ಹೊಳಲ್ಕೆರೆ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ವಸಂತಲಕ್ಷ್ಮಿ. (ಲೇ.). ಗೋಪಾಲರಾವ್ ಎಚ್.ಎಸ್. (ಪ್ರ.ಸಂ.) (2019). *ಹೊಯ್ಸಳ ಶಿಲ್ಪಕಲೆ.* ಕರ್ನಾಟಕ ಶಿಲ್ಪಕಲಾ ಅಕಾಡಮಿ.


## ಅನುಬಂಧ 1
## ಛಾಯಾಚಿತ್ರಗಳು



**ಚಿತ್ರ 1: ಹೊಸದುರ್ಗದ ಗಣೇಶನ ಗುಡಿ**



**ಚಿತ್ರ 2: ಹೊಸದುರ್ಗದ ಗಣೇಶನ ಮೂರ್ತಿ**



ಚಿತ್ರ 3: ಹೊಳಲ್ಕೆರೆಯ ಬಯಲು ಗಣೇಶ ಮೂರ್ತಿ



ಚಿತ್ರ 5: ಉಗ್ರನರಸಿಂಹನ ಉಬ್ಬು ಶಿಲ್ಪ



ಚಿತ್ರ 4: ಬಯಲು ಗಣೇಶನ ಹಿಂಬದಿಯ ಅಲಂಕಾರ



ಚಿತ್ರ 6: ಬಯಲು ಗಣೇಶನ ಪೀಠದಲ್ಲಿರುವ ಶಾಸನ